**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:5**
**ಸ್ಪೆಷಲ್ ಕೇಸ್ ಸಂಖ್ಯೆ:506/23 ಸಿಡಬ್ಲ್ಯೂ:9**

**ಸಾಕ್ಷಿದಾರರ ಹೆಸರು** : ಕಮಲ
ಗಂಡನ **ಹೆಸರು** : ವಿಠೋಬ ಖಾರ್ವಿ
**ವಯಸ್ಸು** : **60**
**ವೃತ್ತಿ** : ಮೀನು ವ್ಯಾಪಾರ
**ವಾಸ** : ಗುಜ್ಜಾಡಿ ಗ್ರಾಮ

**ದಿನಾಂಕ: 09-10-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಆರೋಪಿತರ ಮತ್ತು ಫಿರ್ಯಾದಿದಾರರ ಕುಟುಂಬದವರ ಪರಿಚಯ ಇದೆ. ನಾನು ಗುಜ್ಜಾಡಿ ಗ್ರಾಮದ ಹೋಲಿ ಕ್ರಾಸ್ ಬಳಿ ಮೊದಲು ಮೀನು ವ್ಯಾಪಾರ ಮಾಡುತ್ತಿದ್ದೆ, ನಾನು ಮೀನು ವ್ಯಾಪಾರ ಮಾಡುವ ಜಾಗ ಸರಕಾರಿ ಜಾಗ ಆಗಿರುತ್ತದೆ. ಆರೋಪಿತರಿಗೂ ಮತ್ತು ಫಿರ್ಯಾದಿದಾರರಿಗೂ ಗಲಾಟೆ ಆದ ವಿಷಯ ನನಗೆ ಗೊತ್ತಿಲ್ಲ. ನಾನು ದಿನಾ ಬೆಳಿಗ್ಗೆ **9.00** ಗಂಟೆಗೆ ಬಂದು ಮಧ್ಯಾಹ್ನ **12.00** ಗಂಟೆಗೆ ಮೀನು ವ್ಯಾಪಾರ ಮಾಡಿ ಮನೆಗೆ ಹೋಗುತ್ತೇನೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ**

ನಾನು ಬೆಳಿಗ್ಗೆ **10.30** ರಿಂದ ಸಂಜೆ **6.30** ರವರೆಗೆ ಮೇಲೆ ಹೇಳಿದ ಸ್ಥಳದಲ್ಲಿ ಮೀನು ವ್ಯಾಪಾರ ಮಾಡುತ್ತೇನೆ ಎಂದರೆ ಸರಿ ಅಲ್ಲಾ. ನಾನು ಮೀನು ವ್ಯಾಪಾರ ಮಾಡುವ ಜಾಗದ ಸಮೀಪ ಆರೋಪಿತರು ಶೆಡ್ ಮಾಡಿಕೊಂಡಿದ್ದು, ಆ ಬಗ್ಗೆ ಫಿರ್ಯಾದಿದಾರರು ಆಕ್ಷೇಪಣೆ

ಸಲ್ಲಿಸುವ ವಿಚಾರ ನನಗೆ ತಿಳಿದಿದೆ ಎಂದರೆ ಸರಿ ಅಲ್ಲಾ. ದಿನಾಂಕಃ16-02-2023 ರಂದು ಸಂಜೆ 6.30 ಗಂಟೆಗೆ ನಾನು ವ್ಯಾಪಾರ ಮುಗಿಸಿ ಮನೆಗೆ ಹೋಗಿದ್ದು, 17-02-2023 ಕ್ಕೆ ಬೆಳಿಗ್ಗೆ ವ್ಯಾಪಾರಕ್ಕೆ ಬಂದು ನೋಡಿದಾಗ ಭಾರತಿ ಗಾಣಿಗ ರವರ ಶೆಡ್ ಹಿಂಭಾಗ ಹೊಂಡ ತೋಡಿರುವುದು ಕಂಡು ಬಂತು ಎಂದರೆ ಸರಿ ಅಲ್ಲಾ. ಭಾರತಿ ಗಾಣಿಗ ಶೌಚಾಲಯಕ್ಕಾಗಿ ಹೊಂಡ ತೋಡಿದ ವಿಚಾರವಾಗಿ 16-02-2023 ರ ರಾತ್ರಿ 8.30 ಗಂಟೆಗೆ ಫಿರ್ಯಾದಿದಾರರು ಮತ್ತು ಆರೋಪಿತರಿಗೂ ಗಲಾಟೆ ಆದ ವಿಚಾರ ನನಗೆ ತಿಳಿಯಿತು ಎಂದು ನಾನು ದಿನಾಂಕಃ22-02-2023 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು.

ಆರೋಪಿತರು ನನ್ನ ಪರಿಚಯದವರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಪಿ ಕೆ ಎಸ್ ರವರು ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**